# ಹೃದಯ ವಾಹಿನಿ

ಜನಮನ ಸ್ಪಂದನದ ಕನ್ನಡ ಮಾಸ ಪತ್ರಿಕೆ

88 ಸಂಪುಟ - 10 ಸಂಚಿಕೆ - 4 ಸೆಪ್ಟೆಂಬರ್ - 14, 2007 ☎ 0824-2455209, 9343343239

E-mail : hrudayavahini@yahoo.co.in ಮಂಗಳೂರು ಬೆಲೆ ರೂ. 7-00




ಹೃದಯವಾಹಿನಿಯ ಓದುಗರಿಗೆ,
ಜಾಹಿರಾತುದಾರರಿಗೆ ಮತ್ತು ಹಿತೈಷಿಗಳಿಗೆ
**ಚೌತಿ ಹಬ್ಬ**ದ ಶುಭಾಶಯಗಳು

# ಕುವೈತ್: ವಿಶ್ವ ಕನ್ನಡ ಸಮ್ಮೇಳನಾಧ್ಯಕ್ಷರಾಗಿ

**ಡಾ ॥ ಜಿ.ಎಸ್. ಶಿವರುದ್ರಪ್ಪ**



ಕುವೈತ್ ಕನ್ನಡ ಕೂಟ, ಕುವೈತ್ ಮತ್ತು ಹೃದಯವಾಹಿನಿ ಪತ್ರಿಕೆ, ಮಂಗಳೂರು ಸಂಯುಕ್ತವಾಗಿ ನವೆಂಬರ್ 30 ಮತ್ತು ಡಿಸೆಂಬರ್ 1 ರಂದು ಕುವೈತ್‌ನಲ್ಲಿ ಎರಡು ದಿನಗಳ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನವನ್ನು ಹಮ್ಮಿಕೊಂಡಿದ್ದೇವೆ.

ದಿನಾಂಕ 29-08-2007 ರಂದು ಸಂಘಟನಾ ಸಮಿತಿ ಮತ್ತು ಸಾಂಸ್ಕೃತಿಕ ಸಮಿತಿಗಳು ಮಂಗಳೂರಿನಲ್ಲಿ ಸಭೆ ಸೇರಿ, ರಾಷ್ಟ್ರಕವಿ ಡಾ॥ ಜಿ.ಎಸ್. ಶಿವರುದ್ರಪ್ಪರವರನ್ನು ಕುವೈತ್‌ನಲ್ಲಿ ಜರುಗಲಿರುವ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನ 2007 ರ ಸಮ್ಮೇಳನಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ರಾಷ್ಟ್ರಕವಿ, ಸನ್ಮಾನ್ಯ ಕವಿ, ಕುವೆಂಪುರವರ ಶಿಷ್ಯ, ಜಿ.ಎಸ್.ಎಸ್. ಎಂದೇ ಖ್ಯಾತರಾಗಿರುವ ಡಾ॥ ಜಿ.ಎಸ್. ಶಿವರುದ್ರಪ್ಪರವರು ದಿನಾಂಕ 07-02-1926 ರಲ್ಲಿ ಅಕ್ಕಮಹಾದೇವಿಯ ನಾಡು ಎಂದು ಪ್ರಸಿದ್ಧವಾಗಿರುವ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು.

ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎ., ಎಂ.ಎ., ಪದವಿ ಗಳಿಸಿ, 'ಸೌಂದರ್ಯ ಸಮೀಕ್ಷೆ' ಎಂಬ ಪ್ರೌಢ ಪ್ರಬಂಧವನ್ನು ಕುವೆಂಪುರವರ ಮಾರ್ಗದರ್ಶನದಲ್ಲಿ ಮಂಡಿಸಿ ಪಿ.ಎಚ್.ಡಿ.ಯನ್ನು ಗಳಿಸಿರುತ್ತಾರೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಜೀವನವನ್ನು ಆರಂಭಿಸಿ, ಹೈದರಾಬಾದ್, ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ದೆಹಲಿಯ ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯತನವಲ್ಲದೆ ಹಲವಾರು ಪ್ರತಿಷ್ಠಿತ ಸಾಹಿತ್ಯ ಸಂಘಟನಾ ಸಂಸ್ಥೆ, ಕೇಂದ್ರಗಳಲ್ಲಿ ಸೇವೆ ಸಲ್ಲಿಸಿದ ಅನುಭವವಿದೆ.

ಶ್ರೀಯುತರು ಹದಿನಾಲ್ಕು ಕವನ ಸಂಕಲನಗಳನ್ನು ರಚಿಸಿದ್ದಾರೆ. ಶ್ರೀಯುತರ ಕವನಗಳಿಗೆ ಸಂಗೀತ ನೀಡಿ, ಹಾಡಿ ಹಲವಾರು ಗಾಯಕರು ಪ್ರಸಿದ್ಧರಾಗಿದ್ದಾರೆ. ಇವರ ಎಲ್ಲಾ ಕವನಗಳೂ ಪ್ರಕೃತಿ ಹಾಗೂ ಜೀವನದ ಮೌಲ್ಯಗಳನ್ನು ವೃದ್ಧಿಸುವಂತಹವುಗಳು. ಅದರ ಒಂದು ಚುಟುಕು.

> ಹಣತೆ ಹಚ್ಚುತ್ತೇನೆ ನಾನು
> ಕತ್ತಲೆಯನ್ನು ದಾಟುತ್ತೇನೆಂಬ
> ಭ್ರಮೆಯಿಂದಲ್ಲ
> ಇರುವಷ್ಟು ಹೊತ್ತು
> ನಿನ್ನ ಮುಖ ನಾನು, ನನ್ನ ಮುಖ
> ನೀನು
> ನೋಡಬಹುದೆಂಬ ಒಂದೇ
> ಒಂದು ಆಸೆಯಿಂದ
> ಹಣತೆ ಆರಿದ ಮೇಲೆ
> ನೀನು ಯಾರೋ, ಮತ್ತೆ ನಾನು
> ಯಾರೋ.....

ಶ್ರೀಯುತರು ಇಪ್ಪತ್ನಾಲ್ಕು ಗದ್ಯ ಕೃತಿಗಳನ್ನು ರಚಿಸಿದ್ದಾರೆ.

ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ – ಆರು ಸಂಪುಟಗಳು

ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ – ಹತ್ತು ಸಂಪುಟಗಳಲ್ಲಿ

ಸಾಹಿತ್ಯ ವಾರ್ಷಿಕ – ಹದಿನಾಲ್ಕು ಸಂಪುಟಗಳಲ್ಲಿ

ಸಂಪಾದಿಸಿ ಸಾಹಿತ್ಯ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ.

ಸನ್ಮಾನ್ಯರು ರಷ್ಯಾ, ಅಮೇರಿಕಾ, ಇಂಗ್ಲೆಂಡ್, ಥ್ಯಾಲ್ಯಾಂಡ್, ಸಿಂಗಪುರ ದೇಶಗಳಲ್ಲದೆ, ಯೂರೋಪಿನ ಕೆಲವು ಪ್ರದೇಶಗಳಿಗೆ ಪ್ರವಾಸ ಮಾಡಿ ಅಲ್ಲಿನ ಜನಜೀವನ ಸಂಸ್ಕೃತಿಗಳನ್ನು ಅಭ್ಯಸಿಸಿ ಸರಳವಾಗಿ ಕನ್ನಡ ನಾಡಿಗೆ ಪರಿಚಯಿಸಿದ್ದಾರೆ.

ಸನ್ಮಾನ್ಯ ಕವಿಗಳಿಗೆ ಸಂದ ಗೌರವಗಳು ಅಪಾರ. ರಾಷ್ಟ್ರಕವಿ ಎಂಬ ರಾಷ್ಟ್ರೀಯ ಪುರಸ್ಕಾರದೊಂದಿಗೆ ಇನ್ನೂ ಹನ್ನೆರಡು ಘನ ಪ್ರಶಸ್ತಿಗಳು ಅರಸಿ ಬಂದಿವೆ. ದಾವಣಗೆರೆಯಲ್ಲಿ

61 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಮೈಸೂರು, ಬೆಂಗಳೂರು, ಶಿವಮೊಗ್ಗ, ಹಂಪಿ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿವೆ.

'ಜಿ.ಎಸ್.ಎಸ್.' ಎಂದೇ ನಾಡಿನಾದ್ಯಂತ ಗುರುತಿಸಲ್ಪಡುವ ಶ್ರೀಯುತರಿಗೆ ಅಭಿಮಾನಿಗಳು, ಹಿತೈಷಿಗಳು, ಶಿಷ್ಯವರ್ಗದವರು 'ಸ್ನೇಹ ಕಾರ್ತಿಕ, ಗೌರವ, ಹಣತೆ' ಎಂಬ ಮೂರು ಗೌರವ ಗ್ರಂಥಗಳನ್ನು ಸಮರ್ಪಿಸಿ ಧನ್ಯರಾಗಿದ್ದಾರೆ.

ಸನ್ಮಾನ್ಯ ರಾಷ್ಟ್ರಕವಿ ಡಾ॥ ಜಿ.ಎಸ್. ಶಿವರುದ್ರಪ್ಪನವರು ಸಮ್ಮೇಳನಾಧ್ಯಕ್ಷ ಹೊಣೆಯನ್ನು ಹೊತ್ತಿರುವುದು ನಮ್ಮೆಲ್ಲರಿಗೂ ಸಂತೋಷವನ್ನುಂಟು ಮಾಡಿದೆ.




